ಮೂರು ಜನರನ್ನು ಬಿಡುಗಡೆ ಮಾಡಲು ಕೋರಿದರು. ಹಾಗೂ ಈ ಪ್ರಕರಣವನ್ನು ಕೈಬಿಡಲು ಸಹ ಕೇಳಿಕೊಂಡರು . ಪಿ.ಎಸ್.ಐ.ಯವರು ಇದಕ್ಕೆ ಒಪ್ಪಲಿಲ್ಲ. ಆದರೆ ಬಂದ ಜನರು ಪಿ.ಎಸ್.ಐ.ಯವರ ಮಾತನ್ನು ಒಪ್ಪದೆ ಅವರ ಜೊತೆ ವಾದ-ವಿವಾದಕ್ಕೆ ಇಳಿದರು. ಈ ವಾದ-ವಿವಾದವು ಅತಿರೇಕಕ್ಕೆ ತಲುಪಿದಾಗ ಪಿಎಸ್ಐ ಅವರು ಅವರನ್ನು ಕೊಪದಿಂದ ಲಾಕ್ಅಪ್ಗೆ ತಳ್ಳಿದರು. ಈ ಘಟನೆಯ ಬಗ್ಗೆ ಹೊರಗಡೆ ಇದ್ದ ಅವರ ಅನುಯಾಯಿಗಳಿಗೆ ವಿಷಯ ತಿಳಿದು ಸುಮಾರು 800 ಜನರು ಗುಂಪು ಸೇರಿ ಠಾಣೆಯ ಮೇಲೆ ಕಲ್ಲುತೂರಾಟ ಪ್ರಾರಂಭಿಸಿದರು. ಈ ಕಲ್ಲು ತೂರಾಟದಲ್ಲಿ ಠಾಣೆಯ ಕಿಟಕಿ ಗಾಜುಗಳು ಒಡೆದು ಠಾಣೆಯ ಫಲಕಕ್ಕೂ ಕೂಡ ಹಾನಿ ಉಂಟಾಯಿತು. ಶನಿವಾರ ಸಂತೆಯಲ್ಲಿದ್ದ ಸಿ.ಪಿ.ಐ ಹಾಗೂ ಹಾರಂಗಿಯಲ್ಲಿದ್ದ ಡಿವೈಎಸ್ಪಿ ಕುಶಾಲನಗರದವರು ವಿಷಯ ತಿಳಿದು ಕೂಡಲೇ ಠಾಣೆಗೆ ಧಾವಿಸಿದರು. ಹಾಗೂ ಉದ್ರಿಕ್ತ ಗುಂಪನ್ನು ಸಮಾಧಾನ ಪಡಿಸುವ ಕಾರ್ಯವನ್ನು ಕೈಗೊಂಡರು. ಅಷ್ಟರಲ್ಲಿ ಪೋಲೀಸ್ ಸೂಪರಿಂಟೆಂಡೆಂಟ್ರವರು ವಿಷಯ ತಿಳಿದು ಅಲ್ಲಿಗೆ ಬಂದರು. ಉದ್ರಿಕ್ತ ಗುಂಪು ಹಿಂಸಾಚಾರಕ್ಕೆ ತಿರುಗುವ ಸಂಭವ ಇದ್ದು ಅವರೆಲ್ಲರೂ ಪಿ.ಎಸ್.ಐ.ಯವರನ್ನೂ ಅಮಾನತ್ತಿನಲ್ಲಿಡಬೇಕೆಂದು ಒತ್ತಾಯಿಸುತ್ತಿದ್ದರು. ಮೇಲ್ನೋಟಕ್ಕೆ ಪಿ.ಎಸ್.ಐಯವರು ಹದ್ದು ಮೀರಿ ನಡೆದಿರುವುದು ಕಂಡುಬಂದಿರುವುದರಿಂದ ಅವರನ್ನು ಅಮಾನತ್ತಿನಲ್ಲಿ ಇಡಲಾಯಿತು. ಉದ್ರಿಕ್ತ ಗುಂಪು ಸಮಾಧಾನಗೊಂಡು ಚದುರಿ ಪರಿಸ್ಥಿತಿ ಹತೋಟಿಗೆ ಬಂತು. ಠಾಣೆಗೆ ಮುತ್ತಿಗೆ ಹಾಕಿ ಕಲ್ಲು ತೂರಾಟ ಮಾಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಸೋಮವಾರಪೇಟೆ ಠಾಣೆಯಲ್ಲಿ ಮೊಕದ್ದಮೆ ಸಂಖ್ಯೆ : 541-93, ಐಪಿಸಿ 143, 147, 148, 427, 353 ಮತ್ತು 149-ಐಪಿಸಿ ಒಂದು ಕೇಸನ್ನು ದಾಖಲು ಮಾಡಿ ದಿನಾಂಕ : 3-3-1993ರಂದು ಬಿ.ಎಂ.ರಾಜು ಮತ್ತು ಇತರ 11 ಜನ ಆರೋಪಿಗಳನ್ನು ದಸ್ತಗಿರಿ ಮಾಡಿ ಸೋಮವಾರಪೇಟೆ ಜೆಎಂಎಫ್ಸಿ ನ್ಯಾಯಾಲಯದಲ್ಲಿ ಹಾಜರುಪಡಿಸಲಾಗಿ ಆರೋಪಿಗಳನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿದೆ. ಶ್ರೀ ಮಲ್ಲೇಶ್, ಪಿಎಸ್ಐಯವರ ಮೇಲಿನ ಪೂರ್ವಭಾವಿ ಇಲಾಖಾ ತನಿಖೆಯನ್ನು ಡಿಎಸ್ಪಿ ಕುಶಾಲನಗರ - ಇವರಿಗೆ ಒಪ್ಪಿಸಿದ್ದು ಪೂರ್ವಭಾವಿ ವಿಚಾರಣೆಯಲ್ಲಿ ಪಿಎಸ್ಐಯವರ ಮೇಲಿನ ಅಪಾದನೆಗಳು ಮೇಲ್ನೋಟಕ್ಕೆ ಸಾಬೀತು ಆಗಿರುವುದು ಕಂಡು ಬಂದಲ್ಲಿ ಅವರ ಮೇಲೆ ಇಲಾಖಾ ವಿಚಾರಣೆ ನಡೆಸುವ ಬಗ್ಗೆ ಕ್ರಮ ಕೈಗೊಳ್ಳಲಾಗುವುದು. ಇದೀಗ ಸೋಮವಾರಪೇಟೆ ಠಾಣೆಯ ಸರಹದ್ದಿನಲ್ಲಿ ಪರಿಸ್ಥಿತಿ ಶಾಂತವಾಗಿದೆ.

ಶ್ರೀ ಎ. ಎಂ. ಬೆಳ್ಳಿಯಪ್ಪ : ಮಾನ್ಯ ಅಧ್ಯಕ್ಷರೇ, ಬಹಳ ಬೇಸರದ ಸಂಗತಿ ಅರಿದರೆ, ಈ ಹೇಳಿಕೆಯಲ್ಲಿ ಹೇಳಿರುವಂಥ ಕೆಲವು ವಿವರಗಳು ಸತ್ಯಕ್ಕೆ ದೂರವಾದಂಥ ವಿಷಯಗಳು. ಈ ವಿವರಗಳನ್ನು ಪೋಲೀಸ್ ಅಧಿಕಾರಿಗಳು ಸರ್ಕಾರಕ್ಕೆ ತಿಳಿಸಿದ್ದಾರೆ. ನನ್ನ ಹತ್ತಿರ ಎಸ್ಪಿಯವರು ಸರ್ಕಾರಕ್ಕೆ ಕಳುಹಿಸಿರತಕ್ಕಂಥ ರಿಪೋರ್ಟ್ ಇದೆ. ಅದನ್ನು ಓದಿ ನೋಡುವಾಗ ಈ ಸಬ್ಇನ್ಸ್ಪೆಕ್ಟರ್ ಮಲ್ಲೇಶ್ ಎಂಬವರು ಏನೂ ತಪ್ಪು ಮಾಡಿಲ್ಲ. 21-2-1993 ರಂದು ಅಲ್ಲಿ ಗಲಾಟೆ ನಡೆದಿದ್ದು, 27-2-1993ರ ಮಧ್ಯರಾತ್ರಿ ಈ ಸಬ್ಇನ್ಸ್ಪೆಕ್ಟರ್ ಮತ್ತು ಸರ್ಕಲ್ ಇನ್ಸ್ಪೆಕ್ಟರ್ರವರು ಅಲ್ಲಿಗೆ ಹೋಗಿ, ಸೋಮವಾರ ಪೇಟೆ ಪೋಲೀಸ್ ಸ್ಟೇಶನ್ನಿಂದ ಸುಮಾರು 10 ಕಿ.ಮಿ. ದೂರದಲ್ಲಿ ಒಂದು ಕಡೆ ಜೂಜಾಡುತ್ತಿದ್ದವರನ್ನು ಹಿಡಿದುಕೊಂಡು ಬಂದಿದ್ದಾರೆ. ಅವರ ಮೇಲೆ ಕೇಸ್ ಕೂಡ ದಾಖಲು ಮಾಡಿದ್ದಾರೆ. ಆ ಜೂಜಾಡುತ್ತಿದ್ದವರಲ್ಲಿ ಸುಂದರ ಎಂಬುವನು ಪೋಲೀಸ್ ಇಲಾಖೆಯ ನೇಮಕಾತಿಯಲ್ಲಿ ಸೆಲೆಕ್ಟ ಕೂಡ ಆಗಿದ್ದಾನೆ. ಅಂಥ ಒಬ್ಬ ಮನುಷ್ಯನನ್ನು ಹಿಡಿದುಕೊಂಡು ಬಂದಾಗ ಸೋಮವಾರ ಪೇಟೆಯ ಬಿಜೆಪಿಯ ಅಧ್ಯಕ್ಷ, ಮತ್ತು ಇತರ ಮೂರು ಜನರು ಹೋಗಿ, ಈ ಕೇಸನ್ನು ವಿಥ್ಡ್ರಾ ಮಾಡಬೇಕು, ಡ್ರಾಪ್ ಮಾಡಬೇಕು, ಆ ಅಪರಾಧಿಗಳನ್ನು ಬಿಡುಗಡೆ ಮಾಡಬೇಕೆಂದು ಬಲಾತ್ಕಾರ ಮಾಡುವಂಥ ಸಂದರ್ಭದಲ್ಲಿ ಪೋಲೀಸ್

ಸಬ್‌ಇನ್ಸ್‌ಪೆಕ್ಟರ್ ಆಗುವುದಿಲ್ಲವೆಂದು ಹೇಳಿದಾಗ, ಅವರನ್ನು ಹೊಡೆದು, ಪುನಃ ಅರ್ಧಗಂಟೆ ಕಳೆದ ಮೇಲೆ, ಇವರ ಕೆಲವು ಜನಗಳು ಸುಮಾರು 400-500 ಜನಗಳು ಪೋಲೀಸ್ ಸ್ಟೇಶನ್‌ಗೆ ಬಂದು ಮುತ್ತಿಗೆ ಹಾಕಿ, ಠಾಣೆಗೆ ಕಲ್ಲು ಹೊಡೆದು, ನಾಮಫಲಕವನ್ನು ಬೀದಿಗೆ ತೆಗೆದುಕೊಂಡು ಹೋಗಿ ಸುಟ್ಟು, ಮೇಜು, ಫರ್ನೀಚರ್‌ಗಳನ್ನು ಹೊರಗೆ ಬಿಸಾಡಿ, ಇಷ್ಟೆಲ್ಲಾ ಅನಾಹುತವನ್ನು ಮಾಡಿದ್ದರೂ ಕೂಡ ಇಂಥ ರಿಪೋರ್ಟನ್ನು ಕೊಟ್ಟಿದ್ದಾರೆ. ಅಲ್ಲಿಗೆ ಡಿವೈಎಸ್‌ಪಿ, ಎಸ್‌ಪಿ, ಬಂದಿದ್ದಾರೆ, ಆಗ ಪೋಲೀಸರ ಕೈ ಹಿಡಿದುಕೊಂಡು ಬಿಜೆಪಿ ಕಾರ್ಯಕರ್ತರು ಸಬ್‌ಇನ್ಸ್‌ಪೆಕ್ಟರನ್ನು ತೋರಿಸಿ ಕೊಡಿ ಎಂದು ಇಡೀ ಪೋಲೀಸ್‌ಠಾಣೆ ಮತ್ತು ಸುತ್ತ ಮುತ್ತ ತಿರುಗಿದರೂ ಕೂಡ, ಆಗ ಬಿಜೆಪಿಯ ಮುಖ್ಯಸ್ಥರು, ಶ್ರೀ ಬಿ.ಬಿ. ಶಿವಪ್ಪನವರು ಹೋಗಿ ಈ ಸಬ್‌ಇನ್ಸ್‌ಪೆಕ್ಟರನ್ನು ಅಮಾನತ್ತಿನಲ್ಲಿ ಇಡಬೇಕೆಂದು ಹೇಳಿದಾಗ, ಅವರ ಮಾತಿಗೆ ಬಗ್ಗಿ ಎಸ್‌ಪಿಯವರು ತತೆನನ್ನು ಅಮಾನತ್ತಿನಲ್ಲಿಟ್ಟಿದ್ದಾರೆ. ಇಂಥ ಸಂದರ್ಭದಲ್ಲಿ ನಮ್ಮ ಮುಖ್ಯಮಂತ್ರಿಯವರ ಹತ್ತಿರ ನಾನು ಮಾತನಾಡಿದಾಗ, ಅದರ ಮೇಲೆ ಈಗ ಆ ಸಬ್‌ಇನ್ಸ್‌ಪೆಕ್ಟರನ್ನು ರೀಇನ್‌ಸ್ಟೇಟ್ ಮಾಡಿದ್ದಾರೆ. ಕೊಡಗು ಜಿಲ್ಲಾ ಎಸ್‌ಪಿ ಮತ್ತು ಡಿಎಸ್‌ಪಿಯವರು They have become the stooges of this BJP party. They have not arrested the leaders there. They have arrested some other persons who are not concerned with the offence. ಅದಕ್ಕೋಸ್ಕರವಾಗಿ ಅಂಥ ಒಂದು ಇನ್ವೆಸ್ಟಿಗೇಶನ್‌ಗೆ ತೊಂದರೆಯಾಗಿರುವ ಕಾರಣ ಅದನ್ನು ಸಿಓಡಿ ಮೂಲಕ ಮಾಡಬೇಕೆಂದು ಹೇಳಿದೆ. ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಕೂಡ ಒಪ್ಪಿಕೊಂಡರು. ಅವರು ಎರಡು ಮೂರು ಭಾರಿ ಸಂಬಂಧಪಟ್ಟವರಿಗೆ ಫೋನ್ ಕೂಡ ಮಾಡಿದ್ದಾರೆ. ಆದರೆ ಈ ತನಕವೂ ಏನೂ ಆಗಿಲ್ಲ, ಸಿಓಡಿ ತನಿಖೆಗೆ ಸೂಕ್ತ ಆದೇಶ ಇನ್ನೂ ಹೊರಟಿಲ್ಲ. ಸಿಓಡಿಗೆ ಆರ್ಡರ್ ಆಗಿದೆ, ಇದರ ಮೂಲಕ ಇನ್ವೆಸ್ಟಿಗೇಶನ್ ಆಗುತ್ತದೆ, ಯಾರು ತಪ್ಪು ಮಾಡಿದ್ದಾರೆ ಅಂಥವರ ಅರೆಸ್ಟ್ ಆಗುತ್ತದೆ ಎಂದು ನಾನು ಅಂದುಕೊಂಡಿದ್ದೆ. ಇವೊತ್ತಿಗೆ ಘಟನೆ ಆಗಿ ಒಂದು ತಿಂಗಳು ಐದು ದಿನಗಳು ಆದರೂ ಕೂಡ ಯಾವುದೇ ಕೇಸ್ ಹಾಕಿಲ್ಲ. ಕೆಲವರು ಯಾರು ದೂರದಲ್ಲಿ ಹೇಳಿಕೊಟ್ಟಂಥ ಜನರನ್ನು ಮಾತ್ರ ಅರೆಸ್ಟ್ ಮಾಡಿ, ಯಾರು ಗಲಾಟೆ ಮಾಡಿದ್ದಾರೆ, ಯಾರು ಪ್ರಚೋದನೆ ಮಾಡಿದ್ದಾರೆ ಅವರಿಗೆ ಏನೂ ಮಾಡಿಲ್ಲ. ಇವೊತ್ತು ನಾನು ಹೇಳ ಬಯಸುವುದೇನೆಂದರೆ, I may have to go along with opposition leader and also Mr. Bhyregowda: ಮಾನ್ಯ ಬೈರೇಗೌಡರು ಮತ್ತು ಈಶ್ವರಪ್ಪನವರು ಯಾವ ರೀತಿಯಲ್ಲಿ ವಾದ ಮಾಡಿದರು ಆ ಪ್ರಕಾರ ನಾನು ಕೂಡ ಅರ್ಗ್ಯುಮೆಂಟ್ ಮಾಡಬೇಕಾಗುತ್ತದೆ. ಇವೊತ್ತು ಈ ಸರ್ಕಾರವು ಯಾರು ತಪ್ಪು ಮಾಡಿದ್ದಾರೆ, ಅವರಿಗೆ ಶಿಕ್ಷೆ ಮಾಡದೆ, ಘಟನೆಯ ಬಗ್ಗೆ ಸರಿಯಾಗಿ ಇನ್ವೆಸ್ಟಿಗೇಷನ್ ಮಾಡದೆ, ಎಲ್ಲಾ ವಿಚಾರಗಳಲ್ಲಿಯೂ ವಿಫಲರಾಗಿದ್ದಾರೆ ಎಂಬ ಮಾತನ್ನು ನಾನು ಕೂಡ ಹೇಳಬೇಕಾಗುತ್ತದೆ. ನಾನು ಆಡಳಿತಪಕ್ಷದಲ್ಲಿದ್ದರೂ ಕೂಡ ಈ ಮಾತನ್ನು ಹೇಳಬೇಕಾಗುತ್ತದೆ. ನಾನು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುವುದು ಏನೆಂದರೆ, ಈಗ ಇಲ್ಲಿ ಮುಖ್ಯಮಂತ್ರಿಗಳಾಗಲೀ, ಅಥವಾ ಗೃಹರಾಜ್ಯ ಸಚಿವರಾಗಲೀ ಇಲ್ಲ. ಆದಕಾರಣ ಸಂಸದೀಯ ವ್ಯವಹಾರಗಳ ಸಚಿವರಾದ ಶ್ರೀ ರಾಮಸ್ವಾಮಿಯವರಲ್ಲಿ ಕೇಳಿಕೊಳ್ಳುವುದೇನೆಂದರೆ, ದಯವಿಟ್ಟು ಈ ವಿಚಾರವನ್ನು ಸಿಓಡಿಗೆ ಒಪ್ಪಿಸಿ. at the hands of the BJP people things are going from bad to worse. Somawarpet is a peace loving area. ಆದ್ದರಿಂದ ದಯಮಾಡಿ ಈ ವಿಚಾರವನ್ನು ಲಘುವಾಗಿ ತೆಗೆದುಕೊಳ್ಳಬೇಡಿ. ಇಲ್ಲಿ ಮೂರು ವರ್ಷಗಳ ಹಿಂದೆ ಆದಂಥ ಮತೀಯ ಗಲಾಟೆಯಲ್ಲಿ ಲಕ್ಷೋಪಲಕ್ಷ ರೂಪಾಯಿಗಳ ಆಸ್ತಿಗಳು ಲೂಟಿ ಆದವು. ಅಲ್ಪಸಂಖ್ಯಾತರ ಮನೆಗಳನ್ನು ಒಡೆದರು, ಜನಗಳನ್ನು ಕೊಂದರು, ಲೂಟಿ ಮಾಡಿದರು ಅಂಥ ಒಂದು ತಾಲ್ಲೂಕಿನಲ್ಲಿ ಈ ತರಹ ಆಗುತ್ತಾ ಇದೆ. ಆದರೆ ಪೋಲೀಸರು ಅಲ್ಲಿ ಏನೂ ಆಗಿಲ್ಲ ಎಂದು ತಿಳಿದುಕೊಂಡರೆ ನಮ್ಮ ಜನರ ಗತಿ ಏನಾಗುತ್ತದೆ? ಯಾವಾಗಲೂ ಬಂದ್

ಆಚರಿಸುವುದು, ಯಾವಾಗಲೂ ಅಂಗಡಿಗಳನ್ನು ಮುಚ್ಚಿಸುವುದು, ಹೀಗೆ ಈ ನಾಲ್ಕೈದು ಜನರು ಹೇಳಿದ ಹಾಗೆ ನಮ್ಮ ಇಡೀ ತಾಲ್ಲೂಕು ನಡೆಯಬೇಕಾಗಿದೆ. ಹಾಗೆಯೇ ಪೋಲೀಸ್‌ನವರು ಕೂಡ ನಡೆಯುತ್ತಾ ಇದ್ದಾರೆ. ಆದ್ದರಿಂದ ನಾನು ತಮ್ಮಲ್ಲಿ ಕೇಳಿಕೊಳ್ಳುವುದೇನೆಂದರೆ, you have to take serious note of my statement and you have to direct the COD to investigate the case and you have to see that some solace is given to the people of Somawarpet.

ಶ್ರೀ ಎ.ಟಿ. ರಾಮಸ್ವಾಮಿ : ಸನ್ಮಾನ್ಯ ಸಭಾಧ್ಯಕ್ಷರೇ, ಸರ್ಕಾರದ ಲಿಖಿತ ಉತ್ತರದಲ್ಲಿ ಸೋಮವಾರ ಪೇಟೆಯ ಪಿ.ಎಸ್.ಐ.ನವರು ಹದ್ದು ಮೀರಿ ನಡೆದುಕೊಂಡಿರುವುದು ಕಂಡುಬಂದಿದೆ. ಆದುದರಿಂದ ಅವರ ಮೇಲೆ ಇಲಾಖಾ ವಿಚಾರಣೆಯನ್ನು ಮಾಡಿ ಶಿಸ್ತಿನ ಕ್ರಮವನ್ನು ಕೈಗೊಳ್ಳಲಾಗುವುದು ಎಂದು ಹೇಳಿದ್ದಾರೆ. ಅವರೇ ಮತ್ತೊಂದು ಕಡೆಯಲ್ಲಿ 27ರ ಫೆಬ್ರವರಿಯಲ್ಲಿ ರಾತ್ರಿ ಜೂಜಾಡುತ್ತಿದ್ದ ನಾಲ್ಕು ಜನರನ್ನು ಬಂಧಿಸಿ ಠಾಣೆಗೆ ಕರೆದುಕೊಂಡು ಬಂದಿದ್ದಾರೆ ಎಂದು ಹೇಳಿದ್ದಾರೆ. ನಾಲ್ಕು ಜನ ಯಾರು ಜೂಜಾಡುತ್ತಿದ್ದರು ಅವರನ್ನು ಬಂಧಿಸಿ ಠಾಣೆಗೆ ಕರೆದುಕೊಂಡು ಬಂದಿದ್ದಾರೆ. ಜೂಜುಕೋರರನ್ನು ಬಿಡಿ ಎಂದು 28ನೇ ತಾರೀಖು ಕೆಲವರು ಹೋಗಿ ಗಲಾಟೆಯನ್ನು ಮಾಡಿದ್ದಾರೆ. ಗಲಾಟೆ ಮಾಡಿ ಅಲ್ಲಿಯ ಆಸ್ತಿಗೆ ಹಾನಿಯನ್ನು ಮಾಡಿದ್ದಾರೆ. ಇದರಲ್ಲಿ ಪಿ.ಎಸ್.ಐ ತಪ್ಪು ಏನು? ಜೂಜುಕೋರರನ್ನು, ದಂಗೆಕೋರರನ್ನು ಅಥವಾ ರೌಡಿಗಳನ್ನು ಅರೆಸ್ಟ್ ಮಾಡಬಾರದೇ? ಅರೆಸ್ಟ್ ಮಾಡಿದ್ದಕ್ಕೆ ಈಗ ಪಿ.ಎಸ್.ಐ. ಮೇಲೆ ಕ್ರಮ ಕೈಗೊಳ್ಳುತ್ತಿದ್ದೀರಿ, ಹೀಗಾದರೆ ನೈತಿಕ ಸ್ಥೈರ್ಯ ಈ ಇಲಾಖೆಗೆ ಬರುತ್ತದೆಯೇ? ಕಳ್ಳರು ಕಾಕರನ್ನು ಮಟ್ಟ ಹಾಕಲಿಕ್ಕೆ ಆಗುತ್ತದೆಯೇ? ನೀವೇ ಜೂಜುಕೋರರನ್ನು ಅವರು ಬಂಧಿಸಿದರೆಂದು ಹೇಳುತ್ತೀರಿ, 4 ಜನರನ್ನು ಬಂಧಿಸಿದ್ದರು, ಅವರನ್ನು ಬಿಡಿ ಎಂದು ಹೇಳಿ ಒಂದು ಗುಂಪು ಹೋಗಿ ಪೋಲೀಸ್ ಸ್ಟೇಷನ್ ಮುಂದೆ ಗಲಾಟೆ ಮಾಡಿತು. ಸ್ಟೇಷನ್ನಿನ ಆಸ್ತಿಗೆ ಹಾನಿಯನ್ನು ಮಾಡಿದ್ದಾರೆ. ಅದನ್ನೂ ಕೂಡ ವರದಿಯಲ್ಲಿ ಹೇಳಿದ್ದಾರೆ. ಹೀಗೆ ಇದ್ದಾಗಲೂ ಕೂಡ ಪಿ.ಎಸ್.ಐ ನ ಅವರು ಹದ್ದು ಮೀರಿ ನಡೆದಿದ್ದಾರೆ, ಅವರ ಮೇಲೆ ಇಲಾಖಾ ವಿಚಾರಣೆಯನ್ನು ಮಾಡಲಾಗುತ್ತದೆ ಮತ್ತೆ ಸಸ್ಪೆಂಡ್ ಮಾಡಲಾಗಿದೆ ಎಂದು ಹೇಳಿದ್ದಾರೆ. ಇದು ನಿಜಕ್ಕೂ ಕೂಡ ನಾಚಿಕೆಗೇಡಿನ ವಿಚಾರವಾಗಿದೆ. ದಯವಿಟ್ಟು ಸರ್ಕಾರ ಇದರ ಬಗ್ಗೆ ಪುನರ್ ಪರಿಶೀಲನೆಯನ್ನು ಮಾಡಿ ಸರಿಯಾದ ಉತ್ತರವನ್ನು ಕೊಡಬೇಕೆಂದು ನಾನು ತಮ್ಮ ಮೂಲಕ ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಮಲ್ಲಾರಿ ಗೌಡ ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೇ, ಇದು ರಾಜ್ಯದಲ್ಲಿ ನಡೆದಂತಹ ಘಟನೆಯಾಗಿದೆ. ಮಾನ್ಯ ಕಾನೂನು ಮಂತ್ರಿಗಳು ಬಹಳ ವಿಚಿತ್ರವಾದಂತಹ ಉತ್ತರವನ್ನು ಕೊಟ್ಟಿದ್ದಾರೆ. ನಮ್ಮ ಸ್ನೇಹಿತರು ಹೇಳಿದ ಪ್ರಕಾರ, ಜೂಜಾಟ ಆಡುವವರನ್ನು ಅರೆಸ್ಟ್ ಮಾಡಿದ ಮೇಲೆ ಆ ಪಿ.ಎಸ್.ಐ ಅನ್ನು ಸಸ್ಪೆಂಡ್ ಮಾಡಿದರೆ ಯಾವ ತರಹ ನಿಮ್ಮ ಪೋಲೀಸ್ ಇಲಾಖೆ ಸರಿಯಾಗಿ ಕೆಲಸ ಮಾಡುತ್ತದೆ. ಈ ತರಹ ಒಳ್ಳೆಯ ಕೆಲಸವನ್ನು ಮಾಡುವವರಿಗೆ ನೀವು ಸಸ್ಪೆಂಡ್ ಮಾಡಿದರೆ ಏನಾದರೂ ಗೃಹ ಇಲಾಖೆಯಲ್ಲಿ ಸರಿಯಾಗಿ, ಕೆಲಸ ಮಾಡಲಿಕ್ಕೆ ನಿಮ್ಮ ಸರ್ಕಾರದವರು ಅವಕಾಶವನ್ನು ಮಾಡಿಕೊಡುತ್ತಾರೆಯೇ? ಅವರನ್ನು ಸಸ್ಪೆಂಡ್ ಏತಕ್ಕೆ ಮಾಡಿದ್ದೀರಿ? ಅವರನ್ನು ಬೇರೆ ಕಡೆ ಎಲ್ಲಿಗಾದರೂ ವರ್ಗಾವಣೆಯನ್ನು ಮಾಡಿ, ಈ ತರಹ ನೀವು ಪೋಲೀಸ್ ಇಲಾಖೆಯ ಮನೋಧೈರ್ಯವನ್ನು ಕುಂಠಿತ ಮಾಡಿದರೆ ಅಥವಾ ಅವರಿಗೆ ಮಾನಸಿಕವಾದಂತಹ ವೇದನೆಯನ್ನು ಕೊಟ್ಟರೆ ಪೋಲೀಸ್ ಇಲಾಖೆಗೆ ಧೈರ್ಯ ಎಲ್ಲಿಂದ ಬರುತ್ತದೆ. ಯಾರೋ 600ಜನ ಹೋದರು ಗಲಾಟೆ ಮಾಡಿದರು, ಗಾಜನ್ನು ಹೊಡೆದರು - ಇಷ್ಟೆಲ್ಲಾ ಇದ್ದಾಗ ನೀವು ಆ ಪಿ.ಎಸ್.ಐ.ನನ್ನು ಸಸ್ಪೆಂಡ್ ಮಾಡುತ್ತೀರಿ, ಏತಕ್ಕೆ ಸಸ್ಪೆಂಡ್ ಮಾಡುತ್ತೀರಿ? ಅಂತಹವರಿಗೆ ನೀವು ಸರಿಯಾಗಿ ಹೇಳಬೇಕು.

ಇಂತಹ ಗಲಾಟಕೋರರಿಗೆ ನೀವು ಸರಿಯಾದಂತಹ ಬುದ್ಧಿಯನ್ನು ಕಲಿಸಬೇಕು. ಇಲ್ಲದೆ ಹೋದರೆ ಸಾರ್ವಜನಿಕವಾಗಿ ಜೀವನವನ್ನು ಮಾಡಲು ನಮ್ಮಂತಹ ರಾಜಕಾರಣಿಗಳಿಗೆ ಕಷ್ಟವಾಗುತ್ತದೆ. ಈ ದೃಷ್ಟಿಯಿಂದ ಬಿ.ಜೆ.ಪಿಯವರು ಇರಬಹುದು, ಕ್ರಾಂಗ್ರೆಸ್‌ನವರು ಇರಬಹುದು ಇಂತಹ ಜೂಜಾಟವನ್ನು ಆಡುವವರಿಗೆ, ಗಲಾಟೆಯನ್ನು ಮಾಡುವವರಿಗೆ ಅವಕಾಶವನ್ನು ಕೊಡಬಾರದು. ಬಿ.ಜೆ.ಪಿಯವರು ಈ ರೀತಿ ಮಾಡುವುದಿಲ್ಲ ಎಂದು ನನ್ನ ಭಾವನೆ ಇತ್ತು. ಅವರನ್ನು ನಾನು ವಿನಂತಿ ಮಾಡುತ್ತಿದ್ದೇನೆ. ಇಂತಹವರು ಯಾರಾದರೂ ಸಮಾಜ ಕಂಟಕರು ಇದ್ದರೆ ಅವರಿಗೆ ಯಾವುದೇ ಪಕ್ಷದವರು ಸಪೋರ್ಟ್ ಮಾಡುವುದು ಸರಿಯಲ್ಲ. ಈಗಾಗಲೇ ನಮ್ಮ ಮಾನ್ಯ ರಾಮಸ್ವಾಮಿಯವರು ಹೇಳಿದ ಪ್ರಕಾರ, ಸರ್ಕಾರಕ್ಕೆ ನೀತಿ ನಿಯಮಾವಳಿಗಳು ಇಲ್ಲ. ಯಾರು ಇದಕ್ಕೆ ಭಾಗಿಯಾಗುತ್ತಾರೆ ಅವರಿಗೆ ಸಪೋರ್ಟ್ ಮಾಡುವುದು. ನಿಮಗೆ ಮತ್ತು ಬಿ.ಜೆ.ಪಿಯವರಿಗೆ ಓಟುಬೇಕು, ಬಿ.ಜೆ.ಪಿಯವರು ನಿಮಗೆ ಓಟನ್ನು ಹಾಕುತ್ತಾರೆ. ಸ್ವಲ್ಪ ಎಚ್ಚರಿಕೆಯಿಂದ ಕೆಲಸವನ್ನು ಮಾಡುವುದು ಒಳ್ಳೆಯದು. ಯಾರೇ ಇರಲಿ. ಆ ಎಸ್.ಪಿ.ಯನ್ನು ನೀವು ಸಸ್ಪೆಂಡ್ ಮಾಡಬೇಕಾಗುತ್ತದೆ. ಪಿ.ಎಸ್.ಐ. ಯವರನ್ನು ಸಸ್ಪೆಂಡ್ ಮಾಡುವುದು ಅಲ್ಲ, ಎಸ್.ಪಿಯವರು ಪಿ.ಎಸ್.ಐಯವರನ್ನು ಸಸ್ಪೆಂಡ್ ಮಾಡಿದ್ದಾರೆ. ಪಿ.ಎಸ್.ಐಯವರನ್ನು ಸಸ್ಪೆಂಡ್ ಮಾಡಿದಂತಹ ಎಸ್.ಪಿಯವರನ್ನು ಸಸ್ಪೆಂಡ್ ಮಾಡಿ, ಆಗ ಅವರಿಗೆ ಬುದ್ಧಿ ಬರುತ್ತದೆ. ಇಲ್ಲಿ ಈ ತರಹ ಉತ್ತರ ಕೊಡುವುದು ಸರಿಯಲ್ಲ, ಮತ್ತೊಂದು ಸಲ ಇದನ್ನು ಪರಿಶೀಲನೆ ಮಾಡಿ ಸಿ.ಓ.ಡಿ. ಎನ್‌ಕ್ವೈರಿ ಮಾಡಿ, ತಪ್ಪಿತಸ್ಥರ ಮೇಲೆ ಯೋಗ್ಯವಾದಂತಹ ಕ್ರಮ ತೆಗೆದುಕೊಳ್ಳಬೇಕು. ಇಲ್ಲಿ ಏನಾಗುತ್ತದೆ ಅಂದರೆ, ನಾವು ನ್ಯಾಯಾಪೀಠದ ಮೇಲೆ ಮಾತನಾಡಿದರೆ ಬಹಳಷ್ಟು ತಪ್ಪಾಗುತ್ತದೆ. ಅವರನ್ನು ಜಾಮೀನಿನ ಮೇಲೆ ಬಿಟ್ಟು ಬಿಡುವುದನ್ನು ತಪ್ಪಿಸಲು ಕಾನೂನಿನಲ್ಲಿ ಬದಲಾವಣೆಯನ್ನು ಮಾಡುವುದಕ್ಕೆ ಆಗುವುದಿಲ್ಲವೇ? ಕಾನೂನಿನಲ್ಲಿ ಬದಲಾವಣೆಯನ್ನು ಮಾಡಿ, ಇಂತಹ ಗಂಭೀರವಾದಂತಹ ಪರಿಸ್ಥಿತಿ ದೇಶದಲ್ಲಿ ಇದ್ದಾಗ ಏತಕ್ಕೆ ಇಂತಹ ಅತಿ ಘೋರ ಅಪರಾಧ ಮಾಡತಕ್ಕಂಥ ಜೂಜಾಟ ಆಡತಕ್ಕಂಥ ಬಾಂಬ್ ಸ್ಫೋಟ್ ಮಾಡತಕ್ಕಂಥ, ಒಂದು ಸಮಾಜದಲ್ಲಿ ವಿಶಿಷ್ಟವಾದಂತಹ ಪರಿಸ್ಥಿತಿ ನಿರ್ಮಾಣ ಮಾಡತಕ್ಕಂಥ ಸಮಾಜಕಂಠಕರನ್ನು ಏಕೆ ನೀವು ಜಾಮೀನಿನ ಮೇಲೆ ಬಿಡಲಿಕ್ಕೆ ಕಾರ್ಯಕ್ರಮವನ್ನು ಹಾಕಿಕೊಳ್ಳುತ್ತಿದ್ದೀರಿ. ಈಗಿನ ಕಾನೂನಿನಲ್ಲಿ ಬದಲಾವಣೆಯನ್ನು ಮಾಡಿ. ಆ ನ್ಯಾಯಪೀಠಕ್ಕೆ ಒಂದು ವಿಶೇಷವಾದಂತಹ ಕಾನೂನಿನ ಬದಲಾವಣೆಯನ್ನು ಮಾಡಿ ಅವರಿಗೂ ಕೂಡ ಅಧಿಕಾರವನ್ನು ಕೊಡಿ. ಇಂತಹವರನ್ನು ನೀವು ಬಿಡಬಾರದೆಂದು ಹೇಳುತ್ತೇನೆ. ಮತ್ತೇನಾದರೂ ಕಾರ್ಯಕ್ರಮವನ್ನು ಮಾಡದೇಹೋದರೆ ಕಷ್ಟವಾಗುತ್ತದೆ. ಈ ಘಟನೆ ಸೋಮವಾರಪೇಟೆಯಲ್ಲಿ ಆಗುತ್ತದೆ, ನಾಳೆ ನಿಮ್ಮಲ್ಲಿಯೂ ಆಗುತ್ತದೆ, ನಾಳೆ ನಮ್ಮಲ್ಲಿಯೂ ಕೂಡ ಆಗುತ್ತದೆ. ಜೂಜಾಟ ಆಡುವವರು, ಮಟ್ಕಾ ಆಡುವವರು ಇಡೀ ರಾಜ್ಯದಲ್ಲಿ ಅಲ್ಲ ಇಡೀ ದೇಶದಲ್ಲಿದ್ದಾರೆ. ಇದರಿಂದ ಬಹಳ ಕಷ್ಟವಾಗುತ್ತದೆ. ಮಾನ್ಯ ಕಾನೂನು ಮಂತ್ರಿಗಳು ಇಂತಹ ಉತ್ತರವನ್ನು ಕೊಡುತ್ತಾರೆಂದು ನನಗೆ ಅನ್ನಿಸಿರಲಿಲ್ಲ. ಈ ಸ್ಟೇಟ್‌ಮೆಂಟ್‌ನ್ನು ಮಾಡುವುದಕ್ಕೆ ಮುಂಚಿತವಾಗಿ ತಾವು ಒಂದು ಸಲ ಓದುವುದು ಒಳ್ಳೆಯದು. ನಾನು ಕೂಡ ಮಂತ್ರಿಯಾಗಿ ಕೆಲಸ ಮಾಡಿದ್ದೇನೆ; ನನಗೂ ಅಧಿಕಾರಿಗಳು ಇಂತಹ ಸ್ಟೇಟ್‌ಮೆಂಟನ್ನು ಕೊಟ್ಟರು. ಆದರೆ ನಾನು ಓದಲಿಲ್ಲ, ಅಧ್ಯಕ್ಷರ ಅಪ್ಪಣೆಯನ್ನು ತೆಗೆದುಕೊಂಡು ನಾನೇ ಹೋಗಿ ವಿಷಯ ತಿಳಿದುಕೊಂಡು ಬಂದು ಆಮೇಲೆ ಸ್ಟೇಟ್‌ಮೆಂಟ್ ಮಾಡಿದೆ. ತಮ್ಮಿಂದ ಇಂತಹ ಉತ್ತರವನ್ನು ಕೇಳಿದರೆ ನ್ಯಾಯ ಏನು ಸಿಗುತ್ತದೆ. ತಾವು ಕಾನೂನು ಮಂತ್ರಿಗಳು ದಯವಿಟ್ಟು ಕ್ಷಮಿಸಬೇಕು. ಈ ಮಾತು ತಮ್ಮ ಮನಸ್ಸಿಗೆ ನೋವಾಗಬಹುದು. ಇನ್ನು ಮುಂದಾದರೂ ಉತ್ತರವನ್ನು ಕೊಡುವುದಕ್ಕೆ ಮುಂಚಿತವಾಗಿ ಸರಿಯಾದಂತಹ ಸ್ಟೇಟ್‌ಮೆಂಟನ್ನು ಮಾಡಿ, ಯಾರಾದರೂ ತಪ್ಪು ಸ್ಟೇಟ್‌ಮೆಂಟ್ ಮಾಡಿದರೆ ಅವರಿಗೆ ಎಚ್ಚರಿಕೆಯನ್ನು ತಾವು ಕೊಡಬೇಕು. ಅವರು ಎಷ್ಟೇ ದೊಡ್ಡವರು ಇರಬಹುದು, ಅವರಿಗೆ ಎಚ್ಚರಿಕೆಯನ್ನು ಕೊಡಬೇಕು.

ಶ್ರೀ ಕೆ. ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೆ, ಇದೇ ಸದನದಲ್ಲಿ ನಮ್ಮ ಪಕ್ಷದ ನಾಯಕರ ಹೆಸರು ಇಲ್ಲಿ ಪ್ರಸ್ತಾಪವಾಗಿದೆ. ಅದಕ್ಕೋಸ್ಕರ ನಾನು ಹೇಳುತ್ತಿದ್ದೇನೆ. ಮಾನ್ಯ ಬಿ. ಬಿ. ಶಿವಪ್ಪನವರ ಬಗ್ಗೆ ನನಗೆ ಗೊತ್ತಿಲ್ಲ. ಇಲ್ಲಿ ಯಾರನ್ನು ಅರೆಸ್ಟ್ ಮಾಡಿದ್ದೀರಿ, ಯಾರಿಗೆ ಬಿಟ್ಟಿದ್ದೀರಿ, ಹಾಗೂ ಈ ಘಟನೆಯ ಬಗ್ಗೆ ನನಗೆ ಗೊತ್ತಿಲ್ಲ. ನಾನು ಸ್ಪಷ್ಟವಾಗಿ ಒಬ್ಬ ಬಿ. ಜೆ. ಪಿ. ಕಾರ್ಯಕರ್ತನಾಗಿ ಹೇಳುವುದು ಇಷ್ಟೆ ; ಇದರಲ್ಲಿ ಯಾರು ತಪ್ಪಿತಸ್ಥರು ಇದ್ದಾರೋ ಅವರ ಬಗ್ಗೆ.....

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಈ ಗಮನ ಸೆಳೆಯುವ ಸೂಚನೆಯಲ್ಲಿ ಅವರಿಗೆ ಮಾತನಾಡಲಿಕ್ಕೆ ಅವಕಾಶವಿಲ್ಲ.

ಶ್ರೀ ಕೆ. ಎಸ್. ಈಶ್ವರಪ್ಪ : ಅವರು ಏನು ಡಿಮ್ಯಾಂಡ್ ಮಾಡಿದ್ದಾರೋ, ಅದರಲ್ಲಿ ಸತ್ಯ ಇದೆ. ದಯವಿಟ್ಟು ಇದನ್ನು ಸಿ.ಓ.ಡಿ. ತನಿಖೆಗೆ ಹಾಕಿ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಈ ಗಮನ ಸೆಳೆಯುವ ಸೂಚನೆಯಲ್ಲಿ ಅವರಿಗೆ ಮಾತನಾಡಲಿಕ್ಕೆ ಅವಕಾಶವಿಲ್ಲ. ಅವರಿಗೆ ಬೇಕಾದರೆ ಮತ್ತೊಂದು ಸಲ ಅವಕಾಶವನ್ನು ಕೊಡಿ. ಇಲ್ಲದಿದ್ದರೆ ನಾವು ಮತ್ತೆ ಇಲ್ಲಿ ಗಲಾಟೆ ಮಾಡಬೇಕಾಗುತ್ತದೆ. ಅವರಿಗೆ ಈ ಗಮನ ಸೆಳೆಯುವ ಸೂಚನೆಯಲ್ಲಿ ಮಾತನಾಡುವುದಕ್ಕೆ ಅವಕಾಶವಿಲ್ಲ.

(ಗೊಂದಲ)

ಶ್ರೀ ಕೆ. ಎಸ್. ಈಶ್ವರಪ್ಪ : ಸಿ.ಓ.ಡಿ. ತನಿಖೆಯಾಗಲಿ ಎಂದು ನಾನೂ ಕೂಡ ಒತ್ತಾಯ ಮಾಡುತ್ತೇನೆ.

(ಗೊಂದಲ)

ಶ್ರೀ ಎ. ಎಂ. ಬೆಳ್ಳಿಯಪ್ಪ : ಇಲ್ಲಿ ಹೇಳುವುದಕ್ಕೆ ಕೇಳುವುದಕ್ಕೆ ಯಾರೂ ಇಲ್ಲವೇ?

ಶ್ರೀ ಕೆ. ಎಸ್. ಈಶ್ವರಪ್ಪ : ಸಿ. ಓ. ಡಿ. ತನಿಖೆಯಾಗಬೇಕು ತಾನೆ, ನಾನು ಅದನ್ನೆ ಹೇಳುತ್ತಿದ್ದೇನೆ. ದಯವಿಟ್ಟು ಸಿ.ಓ.ಡಿ. ತನಿಖೆಯನ್ನು ಮಾಡಲಿ. ನಮ್ಮ ಪಕ್ಷದ ಮಾಜಿ ಅಧ್ಯಕ್ಷರ ಹೆಸರು ಬಂದಿದೆ. ಈ ತರಹ ಬಂದಿರಬೇಕಾದರೆ ನನ್ನದೇನು ಪ್ರಶ್ನೆ ಇಲ್ಲ. ಅನ್ಯಾಯವಾಗಿದ್ದರೆ ಸಂಬಂಧಪಟ್ಟವರ ಮೇಲೆ ಖಂಡಿತವಾಗಿ ಕ್ರಮ ತೆಗೆದುಕೊಳ್ಳಿ. ಸರ್ಕಾರದವರು ಏನು ಹೇಳುತ್ತಾರೆ ಅದಕ್ಕೆ ಸಂಪೂರ್ಣವಾಗಿ ನನ್ನ ಬೆಂಬಲ ಇದೆ. ಸಿ.ಓ.ಡಿ ತನಿಖೆಯಾಗಬೇಕು, ಯಾರು ಅನ್ಯಾಯ ಮಾಡಿದ್ದಾರೆ, ಯಾರು ತೊಂದರೆ ಕೊಟ್ಟಿದ್ದಾರೆ, ಅವರ ಬಗ್ಗೆ ಕ್ರಮ ಕೈಗೊಳ್ಳಬೇಕು. ದಯವಿಟ್ಟು ಸಿ.ಓ.ಡಿ. ತನಿಖೆಯಾಗಲೇ ಬೇಕೆಂದು ನಾನೂ ಕೂಡ ಒತ್ತಾಯ ಮಾಡುತ್ತೇನೆ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ : ಮಾನ್ಯ ಅಧ್ಯಕ್ಷರೆ, ಈಗಾಗಲೇ ಜೂಜಾಟವಾಡಿದವರ ಮೇಲೆ ಕೇಸ್ ದಾಖಲಾಗಿದೆ. ಮತ್ತೆ ಅಲ್ಲಿ ಗಲಭೆಯನ್ನು ಮಾಡಿ, ಪೋಲೀಸ್‌ನವರ ಮೇಲೆ ಹಲ್ಲೆ ಮಾಡಿದವರ ಮೇಲೂ ಕೇಸ್ ದಾಖಲಾಗಿದೆ. ಮಾನ್ಯ ಮಲ್ಲಾರಿಗೌಡ ಪಾಟೀಲರು ಇಂತಹವರನ್ನೆಲ್ಲ ಏತಕ್ಕೆ ಜಾಮೀನು ಮೇಲೆ ಬಿಡುತ್ತಾರೆಂದು ಹೇಳಿದರು, ನಾನು ಅವರ ವಾದವನ್ನು ಒಪ್ಪುತ್ತೇನೆ. ಆದರೆ ಏನಾಗಿದೆ ಅಂದರೆ we have become helpless.

ಕಾನೂನು ಏನು ಹೇಳುತ್ತದೆ ಅಂದರೆ, ಜೀವಾವಧಿ ಶಿಕ್ಷೆ ಮತ್ತು ಮರಣದಂಡನೆಗೆ ಒಳಗಾಗತಕ್ಕಂಥ ಕೇಸ್‌ಗಳು ಏನಿವೆಯೋ ಅದರ ಮೇಲೆ ಬಿಡುವ ಹಾಗೆ ಇಲ್ಲ. ಬಾಕಿ ಎಲ್ಲಾ ಮೊಕದ್ದಮೆಗಳಲ್ಲಿಯೂ ಜಾಮೀನಿನ ಮೇಲೆ ಬಿಡತಕ್ಕಂಥ ಅವಕಾಶ ನಮ್ಮ ಕ್ರಿಮಿನಲ್ ಕಾಯಿದೆಯಲ್ಲಿದೆ. ಆದ್ದರಿಂದ ಕೋರ್ಟ್‌ನವರು ಏತಕ್ಕೆ ಹೀಗೆ ಮಾಡಿದರು, ಏಕೆ ಬಿಟ್ಟರು ಎಂದು ಹೇಳತ್ಕಂಥ ಅಧಿಕಾರ ನಮಗೆ ಇಲ್ಲ. ಆದರೆ ಮಾನ್ಯ ಬೆಳ್ಳಿಯಪ್ಪನವರು ಬಹಳ ಮುಖ್ಯವಾದಂತಹ ಅಂಶವನ್ನು ಹೇಳಿದ್ದಾರೆ. ಅದರ ಬಗ್ಗೆ ನಾನು ಮುಖ್ಯಮಂತ್ರಿಗಳ ಜೊತೆಯಲ್ಲಿಯೂ ಮಾತನಾಡಿದ್ದೇನೆ. ಇದರ ಬಗ್ಗೆ ಸಿ.ಓ.ಡಿ. ತನಿಖೆಯಾಗಬೇಕೆನ್ನುವಂತಹ ಮಾತನ್ನು ಅವರು ಹೇಳಿದ್ದಾರೆ. ಈ ಮಾತನ್ನು ಒಪ್ಪುತ್ತೇನೆ, ಈ ವಿಷಯವನ್ನು ಸಿ.ಓ.ಡಿ. ಪರಿಶೀಲನೆಗೆ ನಾವು ಕಳುಹಿಸಿಕೊಡುತ್ತೇವೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಆ ಪಿ.ಎಸ್.ಐ ಸಸ್ಪೆಂಡ್ ಏನಾಗಿದೆ, ಅದನ್ನು ರಿವೋಕ್ ಮಾಡಬೇಕು. ಅವರು ಏನು ತಪ್ಪು ಮಾಡಿದ್ದಾರೆ? ತಪ್ಪು ಮಾಡದೆ ಇರುವಂತಹ ಪಿ.ಎಸ್.ಐ ನವರನ್ನು ತಾವು ಸಸ್ಪೆಂಡ್ ಮಾಡಿದರೆ ಕೆಲಸ ಮಾಡುವುದಕ್ಕೆ ಏನು ಅವಕಾಶವಾಗುತ್ತದೆ.

ಅಧ್ಯಕ್ಷರು : ತಾವು ಸಿ.ಓ.ಡಿ. ತನಿಖೆ ಮಾಡಬೇಕೆಂದು ಕೇಳಿದ್ದೀರಿ. ಅವರು ಮಾಡುತ್ತೇವೆಂದು ಹೇಳಿದರು. ಅವರ ಅಮಾನತ್ತನ್ನು ರದ್ದು ಮಾಡಿ ಅವರನ್ನು ಬೇರೆ ಕಡೆ ಬೇಕಾದರೆ ವರ್ಗ ಮಾಡಿ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ : ಮಾನ್ಯ ಅಧ್ಯಕ್ಷರೆ, ನಮ್ಮ ಮಾನ್ಯ ಸದಸ್ಯರಾದಂತಹ ಮಲ್ಲಾರಿಗೌಡರು ಏಕೆ ಹೀಗೆ ಮಾಡುತ್ತಾರೋ ನನಗೆ ಅರ್ಥವಾಗುವುದಿಲ್ಲ. ನಾನು ಇಲ್ಲಿ ಏನನ್ನು ಮಾತನಾಡಬೇಕಾದರೂ ಮುಖ್ಯಮಂತ್ರಿಯವರನ್ನು ಕೇಳಿಕೊಂಡು ಬಂದೇ ಮಾತನಾಡುತ್ತೇನೆ. ವಿಷಯ ಗೊತ್ತಿಲ್ಲದೆ ಹೋದರೆ ತಿಳಿದುಕೊಂಡು ಬಂದು ಮಾತನಾಡುತ್ತೇನೆ. ಇಲ್ಲದೆ ಹೋದರೆ ಟೈಂ ಕೊಡಿ ಎಂದು ಕೇಳುತ್ತೇನೆ. ಸುಮ್ಮನೆ ಈ ತರಹ ಬೇಜವಾಬ್ದಾರಿಯುತವಾಗಿ ಮಾತನಾಡುವುದು ಸರಿಯಲ್ಲ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ನನ್ನದು ಬೇಜವಾಬ್ದಾರಿ ಅಲ್ಲ, ಅವರು ಹೇಳುವುದೇ ಬೇಜಾವಾಬ್ದಾರಿ ಎಂದು ಹೇಳಬೇಕಾಗುತ್ತದೆ. ಅವರು ಹೇಳುವುದು ಬೇಜವಾಬ್ದಾರಿತನ? ಈ ತರಹ ಮಾತು ಹೇಳಿರುವುದನ್ನು ತಾವು ಕಡಿತದಿಂದ ತೆಗೆಯಬೇಕು. ಇದರಲ್ಲಿ ಬೇಜವಾಬ್ದಾರಿತನದಿಂದ ಏನನ್ನು ಹೇಳಿದ್ದೇನೆ. ನೀವೇನು ಉತ್ತರವನ್ನು ಕೊಟ್ಟಿದ್ದೀರಿ, ಆ ಉತ್ತರದ ಪ್ರಕಾರ ನಾವು ಕೇಳುತ್ತಿದ್ದೇವೆ. ಯಾರು ತಪ್ಪು ಮಾಡಿಲ್ಲ, ಅವರನ್ನು ಸಸ್ಪೆಂಡ್ ಮಾಡಿದ್ದೀರಿ. ಅವರನ್ನು ರಿವೋಕ್ ಮಾಡುವುದರಲ್ಲಿ ಏನು ತಪ್ಪಿದೆ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ : ಇದಕ್ಕೆ ಸರಿಯಾದಂತಹ ಉತ್ತರವನ್ನು ಕೊಟ್ಟಿದ್ದೇನೆ.

ಅಧ್ಯಕ್ಷರು : ಶ್ರೀಯುತರಾದಂತಹ ವಿಜಯಕುಮಾರ್ ಶೆಟ್ಟಿ.

ಶ್ರೀ ಎ. ಟಿ. ರಾಮಸ್ವಾಮಿ : ಪಿ.ಎಸ್.ಐ. ಯವರನ್ನು ಸಸ್ಪೆಂಡ್ ಮಾಡಿದ್ದಾರೆ, ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತಿದ್ದಾರೆ.

ಅಧ್ಯಕ್ಷರು : ತಾವು ಮಾತನಾಡಿದ್ದು ಏನೂ ರೆಕಾರ್ಡ್ ಆಗುವುದಿಲ್ಲ. ನಾನು ಬೇಡ ಎಂದು ಹೇಳಿದ್ದೇನೆ. ಸಿ.ಓ.ಡಿ. ಎನ್‌ಕ್ವೈರಿಯನ್ನು ಮಾಡುವುದಕ್ಕೆ ಒಪ್ಪಿಕೊಂಡಿದ್ದಾರೆ.

ಶ್ರೀ ಎ. ಎಂ. ಬೆಳ್ಳಿಯಪ್ಪ : ಸಿ.ಓ.ಡಿ. ತನಿಖೆ ಮಾಡುವುದನ್ನು ಸ್ವಾಗತ ಮಾಡುತ್ತೇವೆ.

3. ವಿಷಯ : ಮಂಗಳೂರು ಜಿಲ್ಲಾ ಕೈಗಾರಿಕಾ ಕೇಂದ್ರದಿಂದ ನೂತನ ಕೈಗಾರಿಕೋದ್ಯಮಗಳಿಗೆ ಕಳೆದ ಮೂರು ವರ್ಷಗಳಿಂದ ಸಬ್ಸಿಡಿ ಸರಿಯಾಗಿ ವಿತರಣೆಯಾಗದೆ ಇರುವುದರಿಂದ ಜಿಲ್ಲೆಯ ಕೈಗಾರಿಕೆಗಳ ಅಭಿವೃದ್ಧಿ ಕುಂಠಿತವಾಗಿರುವ ಬಗ್ಗೆ.

ಶ್ರೀ ವಿಜಯಕುಮಾರ್ ಶೆಟ್ಟಿ (ಸುರತ್‌ಕಲ್) : ಮಾನ್ಯ ಅಧ್ಯಕ್ಷರೇ, ಮಂಗಳೂರು ಜಿಲ್ಲಾ ಕೈಗಾರಿಕಾ ಕೇಂದ್ರದಿಂದ ನೂತನ ಕೈಗಾರಿಕೋದ್ಯಮಗಳಿಗೆ ಕಳೆದ ಮೂರು ವರ್ಷಗಳಿಂದ ಸಬ್ಸಿಡಿ ಸರಿಯಾಗಿ ವಿತರಣೆಯಾಗದಿರುವುದರಿಂದ ಕೈಗಾರಿಕೆಗಳ ಅಭಿವೃದ್ಧಿ ಕುಂಠಿತವಾಗಿರುವ ಬಗ್ಗೆ ಮಾನ್ಯ ಭಾರಿ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕಾ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆಃ

ಶ್ರೀಮತಿ ನಾಗಮ್ಮ ಸಿ. ಕೇಶವ ಮೂರ್ತಿ (ಭಾರಿ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕಾ ಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಕೈಗಾರಿಕಾಭಿವೃದ್ಧಿಯನ್ನು ಸಾಧಿಸಲು ಸರ್ಕಾರವು ರಾಜ್ಯದ ಜಿಲ್ಲೆಗಳನ್ನು ವಲಯಗಳನ್ನಾಗಿ ವಿಂಗಡಿಸಿ ವಲಯ 2, 3 ಮತ್ತು 4ರಲ್ಲಿ ಬರುವ ತಾಲ್ಲೂಕುಗಳನ್ನು ಕೈಗಾರಿಕೆಯಲ್ಲಿ ಹಿಂದುಳಿದ ತಾಲ್ಲೂಕುಗಳೆಂದು ಘೋಷಿಸಿ ಶೇಕಡ 15, 20 ಮತ್ತು 25ರಂತೆ ರಾಜ್ಯ ಸಹಾಯ ಧನವನ್ನು ಕೈಗಾರಿಕಾ ಘಟಕಗಳಿಗೆ ನೀಡುವ ಕ್ರಮ ಕೈಗೊಳ್ಳಲಾಗಿದೆ. ಅದರಂತೆ ಕೈಗಾರಿಕಾ ಘಟಕಗಳಿಗೆ 1990-91ರ ಸಾಲಿನಲ್ಲಿ 700.00 ಲಕ್ಷ ರೂ.ಗಳ ಸಹಾಯಧನವನ್ನು 1991-92ರ ಸಾಲಿನಲ್ಲಿ 1850-00 ಲಕ್ಷ ರೂ.ಗಳ ಸಹಾಯಧನವನ್ನು ಹಾಗೂ 1992-93ರ ಸಾಲಿನಲ್ಲಿ 1500-00 ಲಕ್ಷ ರೂ.ಗಳ ಸಹಾಯ ಧನವನ್ನು ರಾಜ್ಯದಲ್ಲಿರುವ ಕೈಗಾರಿಕೆಗಳಿಗೆ ಅಂದರೆ ಡಿಸೆಂಬರ್ 1989ರ ಅಂತ್ಯದವರೆಗೆ ಮಂಜೂರಾದ ಎಲ್ಲಾ ಕೈಗಾರಿಕಾ ಘಟಕಗಳಿಗೆ ನೀಡಲಾಗಿದೆ.

ಮಂಗಳೂರು ಜಿಲ್ಲೆಯಲ್ಲಿ 1990-91ನೇ ಸಾಲಿನಲ್ಲಿ 58.09 ಲಕ್ಷ ರೂ.ಗಳ ಸಹಾಯಧನವನ್ನು, 1991-92ನೇ ಸಾಲಿನಲ್ಲಿ 118.19 ಲಕ್ಷ ರೂ.ಗಳ ಸಹಾಯಧನವನ್ನು, 1992-93ನೇ ಸಾಲಿನಲ್ಲಿ 55.00 ಲಕ್ಷ ರೂ.ಗಳ ರಾಜ್ಯ ಸಹಾಯಧನವನ್ನು ದಿನಾಂಕ : 30-9-91ರವರೆಗೆ ಮಂಜೂರಾತಿಯನ್ನು ಪಡೆದ ಎಲ್ಲಾ ಕೈಗಾರಿಕಾ ಘಟಕಗಳಿಗೆ ಬಿಡುಗಡೆ ಮಾಡಲಾಗಿದೆ. ದಿನಾಂಕ : 30-9-91ರ ನಂತರ ಮಂಜೂರಾತಿ ಪಡೆದ 288 ಕೈಗಾರಿಕೆಗಳಿಗೆ 277.67 ಲಕ್ಷ ರೂ.ಗಳ ರಾಜ್ಯ ಸಹಾಯಧನವು ಬಾಕಿಯಿರುತ್ತದೆ.

ರಾಜ್ಯದಲ್ಲಿ ಪ್ರತಿ ವರ್ಷವೂ ರೂ. 1250-00 ಲಕ್ಷಗಳಿಂದ 1500-00 ಲಕ್ಷಗಳ ಸಹಾಯಧನವನ್ನು ಕೈಗಾರಿಕೆಗಳಿಗೆ ಮಂಜೂರು ಮಾಡಲಾಗುತ್ತಿದ್ದು, ಇದಕ್ಕೆ ಬೇಕಾಗುವಷ್ಟು ಹಣ ಹಿಂದಿನ ವರ್ಷಗಳ ಆಯವ್ಯಯದಲ್ಲಿ ಒದಗಿಸದೇ ಇದ್ದ ಕಾರಣ ಸಹಾಯಧನವನ್ನು ಕೈಗಾರಿಕೆಗಳಿಗೆ ಸಂಪೂರ್ಣವಾಗಿ ಬಿಡುಗಡೆ ಮಾಡಲು ಸಾಧ್ಯವಾಗುತ್ತಿರಲಿಲ್ಲ.

ಬಾಕಿಯಿರುವ ಈ ಸಹಾಯಧನವನ್ನು ಪೂರ್ಣಗೊಳಿಸಲು ಅಧಿಕ ಹಣವನ್ನು ಆಯವ್ಯಯದಲ್ಲಿ ಒದಗಿಸಲು ಸರ್ಕಾರಕ್ಕೆ ಕೋರಿಕೆಯನ್ನು ಸಲ್ಲಿಸಲಾಗಿತ್ತು. ಈ ಅಂಶವನ್ನು

ಗಮನದಲ್ಲಿಟ್ಟುಕೊಂಡು ಸರ್ಕಾರವು 1993-94ನೇ ಸಾಲಿನ ಆಯವ್ಯಯದಲ್ಲಿ ರೂ.3000-00 ಲಕ್ಷಗಳ ಸಹಾಯಧನವನ್ನು ಒದಗಿಸಿದೆ. ಈ ಹಣವನ್ನು ಚಾಲ್ತಿ ವರ್ಷದ ಎಂ.ಎಂ.ಆರ್. ಪ್ರಕಾರ ಮಂಗಳೂರು ಜಿಲ್ಲೆಯೂ ಸೇರಿದಂತೆ ರಾಜ್ಯದಲ್ಲಿನ ಸಹಾಯಧನ ಬಾಕಿಯಿರುವ ಕೈಗಾರಿಕೆಗಳಿಗೆ ಬಿಡುಗಡೆ ಮಾಡಲಾಗುವುದು.

12.45 ಪಿ. ಎಂ.

* ಶ್ರೀ ವಿಜಯಕುಮಾರ್ ಶೆಟ್ಟಿ : ಇದು ಅತ್ಯುತ್ತಮವಾದದ್ದು, ಆದರೆ ಮೊದಲು ನಾವು ಲೈಸನ್ಸ್ ಮತ್ತು ಪರ್ಮಿಟ್ ಎಲ್ಲದಕ್ಕೂ ಬೆಂಗಳೂರು, ಡೆಲ್ಲಿಯನ್ನು ಹೊಂದಿಕೊಂಡಿರ ಬೇಕಾಗಿತ್ತು. ಈ ಕೈಗಾರಿಕಾ ಕೇಂದ್ರದ ಕಲ್ಪನೆ ಸಾಗತಾರ್ಹವಾದದ್ದು. ಆದರೂ ಜನತಾ ಸರ್ಕಾರದ ಸಂದರ್ಭದಲ್ಲಿ 83 ರಿಂದ 89ರವರೆಗೆ ಯಾವುದೇ ಸಬ್ಸಿಡಿಯನ್ನು ದಕ್ಷಿಣ ಕನ್ನಡ ಜಿಲ್ಲೆಗೆ ಒದಗಿಸಿರಲಿಲ್ಲ ಮತ್ತು ಈಗ ಸುಮಾರು 288 ಇಂಡಸ್ಟ್ರಿಯಲಿಸ್ಟ್ಸ್ ಗಳಿಗೆ 300 ಕೋಟಿಯಷ್ಟು ಸ್ಕ್ಯಾಂಕ್ಷನ್ ಆಗಲಿಕ್ಕೆ ಬಾಕಿ ಇದೆ ಮತ್ತು ಇದನ್ನು ಆದಷ್ಟು ಬೇಗ ಬಿಡುಗಡೆ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ. ಅದೇ ತರಹ ಡಿ.ಐ.ಸಿ.ಯವರು ಏನು ಮಾಡುತ್ತಾರೆಂದರೆ, ಕೆಎಸ್ಎಫ್ಸಿ ಅಥವಾ ಇನ್ನಿತರ ಫೈನಾನ್ಷಿಯಲ್ ಇನ್ಸ್ಟಿಟ್ಯೂಟ್ನಿಂದ ತೆಗೆದುಕೊಳ್ಳಬೇಕೆಂದು ಹೇಳುತ್ತಿದ್ದಾರೆ. ಈ ಕೆಎಸ್ಎಫ್ಸಿ, ಕೆಎಸ್ಐಡಿಸಿ, ಕೆಎಐಡಿಬಿ ಅವರಲ್ಲಿ ಅನ್ಯೋನ್ಯತೆ ಇಲ್ಲದೆ ಬಹಳ ತೊಂದರೆಯಾಗುತ್ತಿದೆ. ಮೊನ್ನೆ ತಾನೆ ಬಜೆಟ್ನಲ್ಲಿ ನೂಡಲ್ ಏಜನ್ಸಿ ಮಾಡುತ್ತೇವೆಂದು ಹೇಳಿದ್ದಾರೆ. ನಿಜವಾಗಲೂ ಇದು ಸ್ವಾಗತಾರ್ಹವಾದದ್ದು. ಇಂಡಸ್ಟ್ರೀಸ್ನವರು ಬಹಳ ಕಾಲದಿಂದ ಈ ಬೇಡಿಕೆಯನ್ನು ಸಲ್ಲಿಸುತ್ತಿದ್ದಾರೆ. ಗುಜರಾತ್ನಲ್ಲಿ ಇದೇ ಪ್ರಕಾರ ಮಾಡಿರುವುದರಿಂದ, ಅಂದರೆ ಈ ಇಂಡಸ್ಟ್ರೀಯಲಿಸ್ಟ್ಗಳ ಬೇಡಿಕೆಯನ್ನು ಒಂದು ತಿಂಗಳೊಳಗೆ ಒದಗಿಸಿಕೊಡುತ್ತಾರೆ. ಆದರೆ ಇಲ್ಲಿ ಏನಾಗಿದೆ ಅಂದರೆ ಸುಮಾರು ಒಂದು ವರ್ಷಕ್ಕೂ ಮೇಲ್ಪಟ್ಟು ಒಂದು ಸಲ ಡಿಐಸಿಯವರು ಕೆಎಸ್ಎಫ್ಸಿಗೆ ಹೋಗಿ ಎಂದು ಹೇಳುತ್ತಾರೆ. ಮತ್ತೊಂದು ಸಲ ಕೆಎಸ್ಎಸ್ಐಡಿಸಿಗೆ ಹೋಗುವುದಕ್ಕೆ ಹೇಳುತ್ತಾರೆ. ಕೊನೆಯದಾಗಿ ಬ್ಯಾಂಕ್ನವರ ಹತ್ತಿರ ಹೋಗಲು ಹೇಳುತ್ತಾರೆ. ಈಗ ನ್ಯಾಷನಲೈಸ್ ಬ್ಯಾಂಕ್ ಯಾವ ರೀತಿ ಸಾಲ ವಿತರಣೆ ಮಾಡುತ್ತಿದೆ ಎನ್ನುವುದು ತಮಗೆ ಗೊತ್ತಿದೆ. ಆದುದರಿಂದ ಈ ನೂಡಲ್ ಏಜೆನ್ಸಿ ಮಾಡಬೇಕೆಂದಿರುವುದನ್ನು ಆದಷ್ಟು ತೀವ್ರಗತಿಯಲ್ಲಿ ನಮಗೆ ಒದಗಿಸಿಕೊಡಬೇಕು. ಮತ್ತೊಂದು ಬೇಡಿಕೆ ಬೈಕಂಪಾಡಿ ಇಂಡಸ್ಟ್ರಿಯಲ್ ಎಸ್ಟೇಟ್ ಬಹಳಷ್ಟು ಅಭಿವೃದ್ಧಿಯಾಗುತ್ತಿದೆ. ಮತ್ತು ಮಂಗಳೂರು ರಿಫೈನರಿ ಮತ್ತು ಜಯಪ್ರಕಾಶ್ ಸ್ಟೀಲ್ ಇಂಡಸ್ಟ್ರೀಸ್ಗಳಂತೆ ಹಲವಾರು ಇಂಡಸ್ಟ್ರೀಸ್ಗಳು ಬರುತ್ತಿವೆ. ಇದನ್ನು ಬೇಸಿಕ್ ಆಗಿ ಇಟ್ಟುಕೊಂಡು ಸುಮಾರು 114 ಸಬ್ಸಿಡರಿ ಇಂಡಸ್ಟ್ರೀಸ್ಗಳು ಬರುತ್ತಿವೆ. ಆದುದರಿಂದ ಈ ನೂಡಲ್ ಏಜನ್ಸಿಯನ್ನು ಮಂಗಳೂರು ಬೈಕಂಪಾಡಿ ಆ ಇಂಡಸ್ಟ್ರಿಯಲ್ ಎಸ್ಟೇಟ್ನಲ್ಲಿ ಪ್ರಾರಂಭ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇದರ ಜೊತೆಯಲ್ಲಿ ಬೈಕಂಪಾಡಿ ಇಂಡಸ್ಟ್ರಿಯಲ್ ಎಸ್ಟೇಟ್ನಲ್ಲಿ ಇನ್ನು 500 ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಂಡು ಅಲ್ಲಿ ಬರುವಂತಹ ಇಂಡಸ್ಟ್ರೀಸ್ನವರಿಗೆ ಒದಗಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಮತ್ತು 1990 ರವರೆಗೆ ನಮ್ಮ ಕರ್ನಾಟಕ ರಾಜ್ಯ 4ನೇ ಸ್ಥಾನದಲ್ಲಿತ್ತು. ಈಗ 15ನೇ ಸ್ಥಾನಕ್ಕೆ ಇಳಿದಿದೆ. ಈ ತರಹ ಪಾಲಿಸಿಗಳನ್ನು ಮಾಡಿಕೊಂಡು ಹೋದರೆ ಖಂಡಿತವಾಗಿ ಬಹಳ ಕಷ್ಟವಾಗುತ್ತದೆ. ಇಂಡಸ್ಟ್ರೀಯಲಿಸ್ಟ್ಗಳು ಅರ್ಜಿಗಳನ್ನು ಒಪ್ಪಿಸಿದ ಒಂದು ತಿಂಗಳು ಅಥವಾ ಎರಡು ತಿಂಗಳೊಳಗೆ ಅವರಿಗೆ ದಯವಿಟ್ಟು ಸಂಪೂರ್ಣ ನೀರಿನ ವ್ಯವಸ್ಥೆ, ವಿದ್ಯುತ್ಚಕ್ತಿ, ಫೈನಾನ್ಷಿಯಲ್ ಅರೇಂಜ್ಮೆಂಟ್ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.